**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. 204/2021**

**ಸಿ.ಡಬ್ಲ್ಯೂ -1, ಪಿ.ಡಬ್ಲ್ಯೂ,1**

ದಿಃ **13.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ಕವಿತ |
| **ಗಂಡ/ತಂದೆಯ ಹೆಸರು** | **ಮಂಜುನಾಥ** |
| **ವಯಸ್ಸು** | 40 ವರ್ಷ |
| **ಕೆಲಸ** | **ಖಾಸಗಿ ಕೆಲಸ** |
| ವಾಸಸ್ಥಳ | ಬೆಟ್ಟದೂರು ಗ್ರಾಮ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಆರೋಪಿ ನನಗೆ ಗೊತ್ತು. ಆರೋಪಿಯನ್ನು ಸಾಕ್ಷಿ ಗುರುತಿಸಿದ್ದಾರೆ. ಆರೋಪಿ ನನ್ನ ವಾರ್ಗಿತಿ. ಚಾಸಾ2 ಮತ್ತು 3 ಗೊತ್ತು. ಸರ್ವೆ ನಂ.21 ರಲ್ಲಿ 1 ಎಕರೆ 12 ಗುಂಟೆಯನ್ನು ನನಗೆ ನನ್ನ ಅತ್ತೆ 2013 ರಲ್ಲಿ ದಾನಪತ್ರದ ಮೂಲಕ ನೀಡಿರುತ್ತಾರೆ. ನನ್ನ ಅತ್ತೆ 2016 ರಲ್ಲಿ ತೀರಿಕೊಂಡಿದ್ದಾರೆ. ನಾನು ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೇನೆ. 2018 ರಲ್ಲಿ ದೂರನ್ನು ನೀಡಿದ್ದೆ. ಮತ್ತೆ 02.06.2020 ರಂದು ದೂರನ್ನು ನೀಡಿರುತ್ತೇನೆ. ಅವರು ನಾನು ಉಳುಮೆ ಮಾಡುತ್ತಿದ್ದ ಜಮೀನಿಗೆ ಬಂದು ತೊಂದರೆ ನೀಡುತ್ತಿದ್ದರು. ಆ ಕಾರಣ ಈ ದೂರನ್ನು ನೀಡಿರುತ್ತೇನೆ. ಸಾಕ್ಷಿ ಒಂದು ದಾಖಲಾತಿ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ, ಆ ದಾಖಲಾತಿ ದೂರಾಗಿದ್ದು ದೂರನ್ನು ನಿಪಿ1, ಸಾಕ್ಷಿ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ನಿಪಿ2, ಸಾಕ್ಷಿ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ನಾನು ನಿಪಿ2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ4 ಮತ್ತು 5 ರವರು ಹಾಜರಿದ್ದರು. ನಾನು ನಿಪಿ2 ಕ್ಕೆ ಸಹಿ ಮಾಡಿದಾಗ ಸಮಯ ಸುಮಾರು 11 ಗಂಟೆಯಾಗಿತ್ತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದಃ**

ದಿಃ21.05.2020 ರಂದು ನೀವು ನಿಮ್ಮ ಜಮೀನನ್ನು ಉಳುಮೆ ಮಾಡಿ ಹಲಸಂದೆ ಫಸಲನ್ನು ಹಾಕಿಸಿದ್ದಿರಿ ಎಂದರೆ ಸರಿ. ದಿಃ02.06.2020 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ನಿಮ್ಮ ಪಕ್ಕದ ಜಮೀನಿನವರಾದ ಮಾಯಣ್ಣ ಎನ್ನುವವರು ನಿಮಗೆ ಕರೆ ಮಾಡಿ ಆರೋಪಿ ನೀವು ಹಾಕಿಸಿದ್ದ ಹಲಸಂದೆ ಕಾಳನ್ನು ಉಳುಮೆ

ಮಾಡಿಸುತ್ತಿದ್ದಾರೆ ಎಂಬ ವಿಷಯ ನಿಮಗೆ ತಿಳಿಸಿದರು ಎಂದರೆ ಸರಿ. ನೀವು ಹಾಗೂ ಚಾಸಾ3 ರವರು ನಿಮ್ಮ ಜಮೀನಿನ ಹತ್ತಿರ ಹೋಗಿ ನೋಡಿದಾಗ ಆರೋಪಿ ನೀವು ಇಲ್ಲದ ಸಮಯದಲ್ಲಿ ಅತಿಕ್ರಮ ಪ್ರವೇಶ ಮಾಡಿ ಹಲಸಂದೆ ಫಸಲು ಹಾಕಿದ ಜಮೀನನ್ನು ಉಳುಮೆ ಮಾಡಿಸಿ ನಷ್ಟಪಡಿಸಿದ್ದರು ಎಂದರೆ ಸರಿ. ಈಗ ಓದಿ ಹೇಳಿದ ಹಾಗೆ ನಿಪಿ1 ರಲ್ಲಿ ನಮೂದು ಮಾಡಿಸಿದ್ದೀರಿ ಎಂದರೆ ಸರಿ.

ನಿಪಿ2 ಕ್ಕೆ ದಿ:03.06.2020 ರಂದು ಪೊಲೀಸರು ನಿಮ್ಮ ಜಮೀನಿನಲ್ಲಿ ಮಹಜರ್ ಕ್ರಮ ಜರುಗಿಸಿ ನಂತರ ನೀವು ಸ್ಥಳದಲ್ಲಿ ಸಹಿ ಹಾಕಿರುತ್ತೀರಿ ಎಂದರೆ ಸರಿ. ಮಹಜರ್ ಮಾಡುವಾಗ ಸಮಯ ಬೆಳಿಗ್ಗೆ 10 ರಿಂದ 11 ಗಂಟೆಯಾಗಿತ್ತು ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ</u>**

ಚಾಸಾ3 ನನಗೆ ಭಾವನಾಗಬೇಕು. ಚಾಸಾ 4 ಮತ್ತು 5 ರವರನ್ನು ನಾನೇ ಜಮೀನಿಗೆ ಕರೆದುಕೊಂಡು ಹೋದೆ. ಚಾಸಾ2 ರವರು ಹಳ್ಳದ ಕಲ್ಲಹಳ್ಳಿಯವರು, ಚಾಸಾ2 ರವರು ನನ್ನ ಸಂಬಂಧಿಕರು. ನನ್ನ ಮಾವನ ಹೆಸರು ರಾಮೇಗೌಡ. ನನ್ನ ಜಮೀನು ನನ್ನ ಮಾವನವರ ಆಸ್ತಿ. ನನ್ನ ಮಾವ ನನ್ನ ಅತ್ತೆಯ ಹೆಸರಿಗೆ ನೊಂದಾಯಿತ ಪತ್ರವನ್ನು ಮಾಡಿರುತ್ತಾರೆ. ನಾನು ಆ ಪತ್ರವನ್ನು ನೋಡಿರುತ್ತೇನೆ. ಸಂಪೂರ್ಣ ಸರ್ವೆ ನಂಬರ್ ಅನ್ನು ಬರೆದಿದ್ದರು. ಸದರಿ ಆಸ್ತಿ ರಾಮೇಗೌಡರವರ ವಾರಸ್ಸುದಾರರಿಗೆ ಸೇರಿದ ಆಸ್ತಿ ಎಂದರೆ ಸರಿ. ಸದರಿ ಆಸ್ತಿ ನಿಮ್ಮ ಅತ್ತೆ ಮತ್ತು ಮಾವನಿಗೆ ಬಿಟ್ಟಂತಹ ಆಸ್ತಿ ಎಂದರೆ ಸರಿ. ಎಲ್ಲಾ ವಾರಸ್ಸುದಾರರಿಗೂ ಭಾಗ ಸಿಕ್ಕಿದೆ ಎಂದರೆ ಸರಿ. ಬೇರೆ ಹೆಣ್ಣುಮಕ್ಕಳಿಗೆ ತಲಾ 30 ಗುಂಟೆ, ನಿಮ್ಮ ಗಂಡ ಹಾಗೂ ಆರೋಪಿಯ ಯಜಮಾನರಿಗೆ ತಲಾ 20 ಗುಂಟೆ ಬಂದಿರುತ್ತದೆ ಎಂದರೆ ಸರಿ. ನಿಮ್ಮ ಅತ್ತೆಗೆ ಬಂದಂತಹ ಆಸ್ತಿಯಲ್ಲಿ ಆರೋಪಿಯ ಯಜಮಾನರಿಗೆ ಹಾಗೂ ನಿಮ್ಮ ಯಜಮಾನರಿಗೆ ಬರಬೇಕೆಂದು ಬರೆದಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.21 ರಲ್ಲಿ 21/3 ಮತ್ತು 21/6 ಎಂದು ಪೋಡಾಗಿದೆ ಅದರಲ್ಲಿ ನೀವು ಒಂದು ಭಾಗದಲ್ಲಿ ಹಾಗೂ ಇನ್ನೊಂದು ಭಾಗದಲ್ಲಿ ಆರೋಪಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಅತ್ತೆ ಬದುಕಿದ್ದಾಗಲೂ ಸಹ ಆರೋಪಿಯ ಗಂಡನೇ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನಾವು ಹುಣಸೂರಿಗೆ ಬಂದು ಸುಮಾರು 24 ವರ್ಷಗಳಾಗಿವೆ. 3 ವರ್ಷದವರೆಗೂ ನಾನೇ ಉಳುಮೆ ಮಾಡುತ್ತಿದ್ದೆ ನಂತರ ಚಾಸಾ2 ರವರಿಗೆ ನೀಡಿದ್ದೆ. ಕಳೆದ 2 ವರ್ಷಗಳಿಂದ ಚಾಸಾ2 ರವರು ನಿಮಗೆ 10,000 ರೂ. ಹಾಗೂ ಆರೋಪಿಗೆ 2 ಮೂಟೆ ರಾಗಿ ನೀಡುತ್ತಿದ್ದಾರೆ ಎಂದರೆ ಸರಿ. 2013 ರಲ್ಲಿ ದಾನಪತ್ರ ಮಾಡಿಕೊಟ್ಟಿರುತ್ತಾರೆ. ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಚಾಸಾ2 ರವರು ನನಗೆ ಕರೆ ಮಾಡಿ ವಿಷಯವನ್ನು ತಿಳಿಸಿದರು. ನಾನು ಜಮೀನಿಗೆ ಹೋಗಿ ನೋಡಿದಾಗ ಯಾರು ಜಮೀನಿನಲ್ಲಿ ಇರಲಿಲ್ಲ. ನಿಪಿ1 ನ್ನು ಪೊಲೀಸರು ಬರೆದಿರುತ್ತಾರೆ. ನಿಪಿ1 ರಲ್ಲಿ ಬರೆದಿರುವ ವಿಚಾರಗಳು ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ನಿಪಿ1 ಕ್ಕೆ ಪೊಲೀಸರು

ಸಹಿ ಹಾಕಿದ್ದಾರೆ ಎಂದರೆ ಸರಿ. ನಾನು ಪೊಲೀಸ್ ಠಾಣೆಗೆ ರಾತ್ರಿ ಸುಮಾರು 8.30-9 ಗಂಟೆಗೆ ಹೋಗಿರುತ್ತೇನೆ. ನಿಪಿ2 ರಲ್ಲಿ ಬರೆದಿರುವ ವಿಚಾರಗಳು ಸರಿಯಾಗಿ ತಿಳಿದಿಲ್ಲ. ನಿಪಿ2 ರಲ್ಲಿ ಬರೆದಿರುವ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ನಿಪಿ2 ನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ. ನಿಮ್ಮ ಅತ್ತೆ ಬದುಕಿರುವವರೆಗೂ ಹಾಗೂ ಇಲ್ಲಿಯವರೆಗೂ  ಆರೋಪಿಯೇ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ ಆದ್ದರಿಂದ ಅತಿಕ್ರಮ ಪ್ರವೇಶ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಅತ್ತೆ ಬದುಕಿರುವವರೆಗೂ ಅವರೇ ಉಳುಮೆ ಮಾಡುತ್ತಿದ್ದರು ಅವರು ತೀರಿಕೊಂಡ ನಂತರ ನಾನು ಉಳುಮೆ ಮಾಡುತ್ತಿದ್ದೇನೆ. ನಮ್ಮ ಜಮೀನು ಮಳೆ ಆಸರೆ ಜಮೀನು. ಆ ಸಮಯದಲ್ಲಿ ಮಳೆಯಾಗದ ಕಾರಣ ಯಾವುದೇ ಬೆಳೆ ಬೆಳೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅತಿಕ್ರಮ ಪ್ರವೇಶ ಮಾಡಿಲ್ಲ ಹಾಗೂ ನಿಮಗೆ ಯಾವುದೇ ರೀತಿಯ ತೊಂದರೆ ಅಥವಾ ನಷ್ಟ ಮಾಡಿಲ್ಲ ಎಂದರೆ ಸರಿಯಲ್ಲ. ಓಎಸ್ 8/2018 ರಂತೆ ಆರೋಪಿ ಅವರಿಗೆ ಪಾಲು ಬರಬೇಕೆಂದು ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಅದು ಚಾಲ್ತಿಯಲ್ಲಿದೆ ಎಂದರೆ ಸರಿ. ಆ ದಾವೆಯಲ್ಲಿ ನೀವು ವಕೀಲರನ್ನು ನೇಮಿಸಿಕೊಂಡು ತಕರಾರು ಸಲ್ಲಿಸಿದ್ದೀರಿ ಎಂದರೆ ಸರಿ. ಚಾಸಾ3 ರವರ ಮಾತನ್ನು ಕೇಳಿ ಸುಳ್ಳು ದೂರನ್ನು ಸಲ್ಲಿಸಿದ್ದೀರಿ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯೂ ಸಹ ನಿಮ್ಮ ಅತ್ತೆಯನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ, ಅವರ ಅಂತಿಮ ಕ್ರಿಯೆಗೆ ಅವರೂ ಸಹ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.